ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue- 4, September - October 2026, Pp. 191-197
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS
editor@srujani.in
www.srujani.in

ವಸಾಹತುಶಾಹಿ ಸಂದರ್ಭದಲ್ಲಿ ಮಾಸ್ತಿಯವರ ಕತೆಗಳು: ಸಂಘರ್ಷ ಮತ್ತು ಸಮನ್ವಯ

ಬಸವರಾಜ ಹೆಮ್ಮಡಗಿ[1] ಮತ್ತು ಡಾ. ಮಲ್ಲಪ್ಪ ಬಂಡಿ[2]

[1]ಸಂಶೋಧನಾ ವಿದ್ಯಾರ್ಥಿ, [2]ಸಹಾಯಕ ಪ್ರಾಧ್ಯಾಪಕರು

ಡಾ.ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

Abstract:

ಈ ಸಂಶೋಧನಾ ಲೇಖನವು ವಸಾಹತುಶಾಹಿ ಸಂದರ್ಭದಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರರ ಕಥಾಸಾಹಿತ್ಯದಲ್ಲಿ ವ್ಯಕ್ತವಾಗಿರುವ ಸಂಪ್ರದಾಯ ಮತ್ತು ಆಧುನಿಕತೆಯ ನಡುವಿನ ಸಂಘರ್ಷ ಹಾಗೂ ಅವುಗಳ ಸಮನ್ವಯವನ್ನು ವಿಶ್ಲೇಷಿಸುತ್ತದೆ. ಬ್ರಿಟಿಷ್ ವಸಾಹತುಶಾಹಿಯ ಆಡಳಿತ, ಶಿಕ್ಷಣ, ನ್ಯಾಯಾಂಗ ಮತ್ತು ಧಾರ್ಮಿಕ ಪ್ರಭಾವಗಳು ಭಾರತೀಯ ಸಮಾಜದ ಸಾಂಸ್ಕೃತಿಕ ಅಸ್ಮಿತೆಯ ಮೇಲೆ ಬೀರಿದ ಪರಿಣಾಮಗಳನ್ನು ಮಾಸ್ತಿಯವರ ಆಯ್ದ ಕಥೆಗಳ ಮೂಲಕ ಅಧ್ಯಯನ ಮಾಡಲಾಗಿದೆ. ಜಾತಿವ್ಯವಸ್ಥೆ, ಸಾಮಾಜಿಕ ನ್ಯಾಯ, ವ್ಯಕ್ತಿಸ್ವಾತಂತ್ರ್ಯ, ಧಾರ್ಮಿಕ ಸಹಿಷ್ಣುತೆ, ಸ್ತ್ರೀ ಸಂವೇದನೆ ಮತ್ತು ಮಾನವೀಯ ಮೌಲ್ಯಗಳಂತಹ ಪ್ರಮುಖ ವಿಷಯಗಳನ್ನು ಕಥನಾತ್ಮಕ ನೆಲೆಯಲ್ಲಿ ವಿಮರ್ಶಿಸಲಾಗಿದೆ. ಪಾಶ್ಚಾತ್ಯ ಆಧುನಿಕತೆಯ ಪ್ರಭಾವವನ್ನು ಸ್ವೀಕರಿಸುತ್ತಲೇ ಭಾರತೀಯ ಪರಂಪರೆಯ ಜೀವಂತ ಮೌಲ್ಯಗಳನ್ನು ಉಳಿಸಿಕೊಳ್ಳುವ ಮಾಸ್ತಿಯವರ ವಿಮರ್ಶಾತ್ಮಕ ಸಮನ್ವಯದ ದೃಷ್ಟಿಕೋನವನ್ನು ಈ ಲೇಖನ ಗುರುತಿಸುತ್ತದೆ. ಅಂತಿಮವಾಗಿ, ಮಾಸ್ತಿಯವರ ಕಥಾಸಾಹಿತ್ಯವು ವಸಾಹತುಶಾಹಿ ಪ್ರಭಾವದ ನಡುವೆಯೂ ದೇಶೀಯ ಸಾಂಸ್ಕೃತಿಕ ಅಸ್ಮಿತೆ, ಮಾನವೀಯತೆ ಮತ್ತು ನೈತಿಕ ಪ್ರಜ್ಞೆಯನ್ನು ಪ್ರತಿಪಾದಿಸುವ ಮಹತ್ವದ ಸಾಹಿತ್ಯಿಕ ಕೊಡುಗೆಯಾಗಿದೆ ಎಂಬುದನ್ನು ಪ್ರತಿಪಾದಿಸಲಾಗಿದೆ.

Keywords: *ವಸಾಹತುಶಾಹಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸಂಪ್ರದಾಯ ಮತ್ತು ಆಧುನಿಕತೆ, ಸಾಂಸ್ಕೃತಿಕ ಅಸ್ಮಿತೆ, ಸಂಘರ್ಷ ಮತ್ತು ಸಮನ್ವಯ*

ಪೀಠಿಕೆ

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧ ಹಾಗೂ ಇಪ್ಪತ್ತನೆಯ ಶತಮಾನದ ಆರಂಭಿಕ ದಶಕಗಳು ಭಾರತೀಯ ಇತಿಹಾಸದಲ್ಲಿ ಕೇವಲ ರಾಜಕೀಯ ಆಧಿಪತ್ಯದ ಬದಲಾವಣೆಯ ಕಾಲವಾಗಿರದೆ, ಸಮಸ್ತ ಸಮಾಜದ ಸಾಂಸ್ಕೃತಿಕ ಅಡಿಪಾಯವೇ ಪಲ್ಲಟಗೊಂಡ ಸಂಧಿಕಾಲವಾಗಿದ್ದವು. ಬ್ರಿಟಿಷ್ ವಸಾಹತುಶಾಹಿಯು ತನ್ನ ಆಡಳಿತಾತ್ಮಕ ಯಂತ್ರಾಂಗವನ್ನು ಬಲಪಡಿಸಲು ರೂಪಿಸಿದ ಏಕಮುಖಿ ಶಿಕ್ಷಣ, ಲಿಖಿತ ಕಾಯ್ದೆಗಳು, ಭೂಸರ್ವೇಕ್ಷಣೆ ಹಾಗೂ ಜನಗಣತಿಯಂತಹ ಪ್ರಕ್ರಿಯೆಗಳು ಭಾರತೀಯರ ಪರಂಪರಾಗತ ಜ್ಞಾನವ್ಯವಸ್ಥೆಯನ್ನು ಪ್ರಶ್ನಿಸಿದವು. ಮೆಕಾಲೆಯ ಶೈಕ್ಷಣಿಕ ನಿಲುವುಗಳು ಹಾಗೂ ಆಧುನಿಕ ವಿಶ್ವವಿದ್ಯಾಲಯಗಳ ಸ್ಥಾಪನೆಯಿಂದ ರೂಪುಗೊಂಡ ನೂತನ ಮಧ್ಯಮವರ್ಗವು ಪಾಶ್ಚಾತ್ಯ ಜ್ಞಾನೋದಯದ ವಿಚಾರವಾದ, ವೈಜ್ಞಾನಿಕ ಪ್ರಜ್ಞೆ

Please cite this article as: ಬಸವರಾಜ ಹೆಮ್ಮಡಗಿ ಮತ್ತು ಮಲ್ಲಪ್ಪ ಬಂಡಿ. (2026). ವಸಾಹತುಶಾಹಿ ಸಂದರ್ಭದಲ್ಲಿ ಮಾಸ್ತಿಯವರ ಕತೆಗಳು: ಸಂಘರ್ಷ ಮತ್ತು ಸಮನ್ವಯ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(4), 191–197

ಮತ್ತು ವ್ಯಕ್ತಿ ಸ್ವಾತಂತ್ರ್ಯದ ಆಕರ್ಷಣೆಗೆ ಒಳಗಾಯಿತು. ಆದರೆ ಈ ಹೊಸ ಬೆಳವಣಿಗೆಯು ತನ್ನೊಂದಿಗೆ ಪರಕೀಯತೆ ಹಾಗೂ ಸಾಂಸ್ಕೃತಿಕ ಅಸ್ಮಿತೆಯ ತಲ್ಲಣಗಳನ್ನೂ ತಂದೊಡ್ಡಿತು. ಎಡ್ವರ್ಡ್ ಸೈದ್ ಅವರು ತಮ್ಮ ಓರಿಯಂಟಲಿಸಂ ಸಿದ್ಧಾಂತದಲ್ಲಿ ವಿಶ್ಲೇಷಿಸಿದಂತೆ, ವಸಾಹತುಶಾಹಿ ಪ್ರಭುತ್ವವು ಸ್ಥಳೀಯ ಸಮಾಜಗಳನ್ನು ಜಡ, ಅವೈಚಾರಿಕ ಹಾಗೂ ಅಂಧಶ್ರದ್ಧೆಯ ನೆಲೆಗಳೆಂದು ಬಿಂಬಿಸಿ, ತನ್ನ ಆಳ್ವಿಕೆಯನ್ನು ನಾಗರಿಕತೆಯ ಉದ್ಧಾರಕ ಯೋಜನೆಯೆಂದು ಸಮರ್ಥಿಸಿಕೊಂಡಿತು. ಇಂತಹ ವಿಷಮ ಸನ್ನಿವೇಶದಲ್ಲಿ ಸ್ಥಳೀಯ ಸಾಂಸ್ಕೃತಿಕ ಸ್ಮೃತಿಯನ್ನು ಸಂರಕ್ಷಿಸುತ್ತಲೇ, ಆಧುನಿಕತೆಯ ಸತ್ಫಲಗಳನ್ನು ತನ್ನದಾಗಿಸಿಕೊಳ್ಳುವ ಇಬ್ಬಂದಿತನ ಭಾರತೀಯ ಚಿಂತಕರನ್ನು ಕಾಡಿತು. ಪಾರ್ಥ ಚಟರ್ಜಿ ಗುರುತಿಸುವಂತೆ, ರಾಷ್ಟ್ರೀಯ ಪ್ರಜ್ಞೆಯು ವಿಜ್ಞಾನ, ತಂತ್ರಜ್ಞಾನ ಮತ್ತು ಆಡಳಿತದಂತಹ ಬಾಹ್ಯ ಕ್ಷೇತ್ರದಲ್ಲಿ ಪಾಶ್ಚಾತ್ಯ ಶ್ರೇಷ್ಠತೆಯನ್ನು ಕಲಿಯಲು ಮುಂದಾದರೂ, ಧರ್ಮ, ಕುಟುಂಬ, ಭಾಷೆ ಮತ್ತು ನೈತಿಕತೆಯಂತಹ ಆಂತರಿಕ ಆಧ್ಯಾತ್ಮಿಕ ಕ್ಷೇತ್ರದಲ್ಲಿ ತನ್ನ ಸಾಂಪ್ರದಾಯಿಕ ಸಾರ್ವಭೌಮತೆಯನ್ನು ರಕ್ಷಿಸಿಕೊಳ್ಳಲು ಗಂಭೀರವಾಗಿ ಯತ್ನಿಸಿತು.

ಕರ್ನಾಟಕದ ಮಟ್ಟಿಗೆ ಈ ಸಂಘರ್ಷವು ಇನ್ನಷ್ಟು ಸಂಕೀರ್ಣವೂ ಬಹುಮುಖಿಯೂ ಆಗಿತ್ತು. ಮುಂಬೈ, ಮದ್ರಾಸ್ ಪ್ರೆಸಿಡೆನ್ಸಿಗಳು, ಮೈಸೂರು ಸಂಸ್ಥಾನ, ಹೈದರಾಬಾದ್ ನಿಜಾಮರ ಆಡಳಿತ ಹಾಗೂ ಕೊಡಗು ಪ್ರದೇಶಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡ ನೆಲದಲ್ಲಿ ಭಾಷಿಕ ಅಸ್ಮಿತೆಯನ್ನು ಪುನರ್ನಿರ್ಮಿಸುವ ಮತ್ತು ರಾಷ್ಟ್ರೀಯತೆಯ ಮಹಾಪ್ರವಾಹದೊಂದಿಗೆ ಬೆಸೆಯುವ ಸವಾಲು ಎದುರಾಯಿತು. ಬಾಸೆಲ್ ಮಿಷನ್, ಮುದ್ರಣಾಲಯಗಳ ವಿಸ್ತರಣೆ ಮತ್ತು ಹೊಸ ಪತ್ರಿಕೋದ್ಯಮವು ಕನ್ನಡ ಗದ್ಯಕ್ಕೆ ಹೊಸ ಆಯಾಮವನ್ನು ತಂದುಕೊಟ್ಟಿತು. ಇಂತಹ ಯುಗಧರ್ಮದ ಕೂಸಾಗಿ ಸಣ್ಣಕತೆಯೆಂಬ ಆಧುನಿಕ ಸಾಹಿತ್ಯ ಪ್ರಕಾರವನ್ನು ರೂಪಿಸಿದ ಪ್ರಮುಖ ಯುಗಪ್ರವರ್ತಕರು ಮಾಸ್ತಿ ವೆಂಕಟೇಶ ಅಯ್ಯಂಗಾರರು. ಮಾಸ್ತಿಯವರ ಬದುಕು ಮತ್ತು ಬರಹಗಳೆರಡೂ ವಸಾಹತುಶಾಹಿ ಪ್ರಭಾವ ಹಾಗೂ ಸಾಂಪ್ರದಾಯಿಕ ಪರಂಪರೆಗಳ ಅಪರೂಪದ ಸಂಗಮವಾಗಿದ್ದವು. ಕಡುಬಡತನದ ಸಾಂಪ್ರದಾಯಿಕ ಶ್ರೀವೈಷ್ಣವ ಕುಟುಂಬದಲ್ಲಿ ಜನಿಸಿ, ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಇಂಗ್ಲಿಷ್ ಎಂ.ಎ. ಪದವಿ ಮತ್ತು ಚಿನ್ನದ ಪದಕ ಪಡೆದ ಅವರು, ಮೈಸೂರು ಆಡಳಿತ ಸೇವೆಯಲ್ಲಿ ಉನ್ನತ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಹೀಗಾಗಿ ಅವರಿಗೆ ಪಾಶ್ಚಾತ್ಯ ಚಿಂತನಾ ಲಯಗಳ ನಿಕಟ ಪರಿಚಯವಿದ್ದಂತೆಯೇ, ಭಾರತೀಯ ಜನಜೀವನದ ಗ್ರಾಮೀಣ ನಾಡಿಮಿಡಿತ ಹಾಗೂ ಧಾರ್ಮಿಕ ಮೌಲ್ಯಗಳ ಆಳವಾದ ಅರಿವಿತ್ತು. ಅವರ ಕಥಾಸಾಹಿತ್ಯವು ಈ ಎರಡು ಪ್ರಪಂಚಗಳ ನಡುವಣ ಸಂಘರ್ಷವನ್ನು ಕೇವಲ ಕಟು ವಿರೋಧವಾಗಿ ಕಾಣದೆ, ಸೃಜನಶೀಲ ಸಮನ್ವಯದ ರಾಜಮಾರ್ಗದಲ್ಲಿ ಮುನ್ನಡೆಸಿದ ಸಾಂಸ್ಕೃತಿಕ ದಾಖಲೆಯಾಗಿದೆ.

ಸಂಪ್ರದಾಯ ಮತ್ತು ಆಧುನಿಕತೆಗಳನ್ನು ಪರಸ್ಪರ ಕಡಿದುಕೊಂಡ ಶತ್ರುಧ್ರುವಗಳೆಂದು ಗ್ರಹಿಸುವುದು ವಸಾಹತುಶಾಹಿ ಚಿಂತನೆಯ ಸರಳೀಕೃತ ಮಾದರಿಯಾಗಿತ್ತು. ಟಿ.ಎಸ್. ಎಲಿಯಟ್ ಸೂಚಿಸುವಂತೆ ಸಂಪ್ರದಾಯವೆಂಬುದು ತಾನಾಗಿಯೇ ದೊರೆಯುವ ಜಡ ಪಿತ್ರಾರ್ಜಿತ ಆಸ್ತಿಯಲ್ಲ; ಅದು ಕಠಿಣ ಶ್ರಮದಿಂದ ಗಳಿಸಬೇಕಾದ ಐತಿಹಾಸಿಕ ಪ್ರಜ್ಞೆಯಾಗಿದೆ. ಗಡಾಮರ್ ಪ್ರತಿಪಾದಿಸುವಂತೆ ಮಾನವನ ಯಾವುದೇ ತಿಳಿವಳಿಕೆಯೂ ಆತನ ಸಾಂಸ್ಕೃತಿಕ ಸಂಪ್ರದಾಯದ ಪರಿಧಿಯೊಳಗೆಯೇ ಸಿದ್ಧಗೊಳ್ಳುತ್ತದೆ. ಇದಕ್ಕೆ ಪ್ರತಿಯಾಗಿ ಕಾಂಟ್ ಮತ್ತು ಮ್ಯಾಕ್ಸ್ ವೆಬರ್ ಪ್ರತಿಪಾದಿಸಿದ ಆಧುನಿಕತೆಯು ವಿಚಾರಪರತೆ, ಮಾನವತಾವಾದ ಮತ್ತು ಲೌಕಿಕ ಕಾನೂನುಗಳ ಮೂಲಕ ಜಗತ್ತನ್ನು ಹೊಸದಾಗಿ ಕಟ್ಟಲು ಬಯಸಿತು. ಆದರೆ ಭಾರತೀಯ ನೆಲದಲ್ಲಿ

ಪ್ರವೇಶಿಸಿದ ವಸಾಹತುಶಾಹಿ ಆಧುನಿಕತೆಯು ಅಧಿಕಾರಯುತ ಶ್ರೇಣೀಕರಣದ ಭಾಗವಾಗಿಯೂ ಕೆಲಸ ಮಾಡಿತು. ಹೋಮಿ ಭಾಭಾ ಅವರ 'ಸಂಕರತೆ' ಹಾಗೂ ಐಸೆನ್‌ಸ್ಟಾಟ್ ಅವರ 'ಬಹುಮುಖಿ ಆಧುನಿಕತೆಗಳು' ಪರಿಕಲ್ಪನೆಗಳ ಬೆಳಕಿನಲ್ಲಿ ಮಾಸ್ತಿಯವರ ಕಥೆಗಳನ್ನು ಗಮನಿಸಿದಾಗ, ಅವರ ಸಾಹಿತ್ಯವು ಪಶ್ಚಿಮದ ಯಾಂತ್ರಿಕ ಅನುಕರಣೆಯಾಗಲೀ ಅಥವಾ ಭಾರತೀಯ ಸಮಾಜದ ಕಂದಾಚಾರಗಳ ಕುರುಡು ಸಮರ್ಥನೆಯಾಗಲೀ ಆಗಿರದೆ, ಒಂದು ದೇಶೀಯ ವಿಮರ್ಶಾತ್ಮಕ ಸಮನ್ವಯತೆಯನ್ನು ರೂಪಿಸಿದ್ದು ಸ್ಪಷ್ಟವಾಗುತ್ತದೆ.

ಮಾಸ್ತಿಯವರ 'ವೆಂಕಟಶಾಮಿಯ ಪ್ರಣಯ' ಕತೆಯು ಸಾಂಪ್ರದಾಯಿಕ ಜಾತಿ ಶ್ರೇಣೀಕರಣ ಮತ್ತು ವ್ಯಕ್ತಿಯ ಪ್ರೇಮಸ್ವಾತಂತ್ರ್ಯದ ನಡುವಿನ ಅಂತರಾಳದ ಸಂಘರ್ಷಕ್ಕೆ ಅತ್ಯುತ್ತಮ ನಿದರ್ಶನವಾಗಿದೆ. ಹಳ್ಳಿಯ ಕ್ಷೌರಿಕ ಸಮುದಾಯಕ್ಕೆ ಸೇರಿದ ವೆಂಕಟಶಾಮಿ, ತಂದೆಯ ನಿರೀಕ್ಷೆಗಳನ್ನೆಲ್ಲ ಮೀರಿ ತನ್ನ ಕುಲಕಸಬಿನಲ್ಲೇ ನೈಪುಣ್ಯತೆ ಮತ್ತು ಕಲೆಯ ಔನ್ನತ್ಯವನ್ನು ಕಾಣುತ್ತಾನೆ. ಆದರೆ ಆತ ಊರಿಗೆ ಬಂದ ಅಲೆಮಾರಿ ಡೊಂಬರ ಜನಾಂಗದ ಮುಗ್ಧ ಕನ್ಯೆಯನ್ನು ಪ್ರೀತಿಸಿದಾಗ, ಆ ಪ್ರೇಮವು ಇಡೀ ಗ್ರಾಮವ್ಯವಸ್ಥೆಯ 'ಕುಲಶುದ್ಧತೆ' ಹಾಗೂ 'ಜಾತಿ ಗೌರವ'ಕ್ಕೆ ಒಡ್ಡಿದ ಸವಾಲಾಗಿ ಪರಿಣಮಿಸುತ್ತದೆ. ಕ್ಷೌರಿಕರು ಡೊಂಬರಿಗಿಂತ ಮೇಲಿನವರೆಂಬ ಸಾಮಾಜಿಕ ಶ್ರೇಣೀಕರಣದ ಪೂರ್ವಾಗ್ರಹದಿಂದಾಗಿ ಹಳ್ಳಿಯ ಹಿರಿಯರು ಸಂಚು ಹೂಡಿ ಡೊಂಬರ ಡೇರೆಯನ್ನು ಊರಿನಿಂದಲೇ ಹೊರದಬ್ಬುತ್ತಾರೆ. ಪ್ರೇಯಸಿಯ ಅಗಲಿಕೆಯಿಂದ ಕಂಗೆಟ್ಟ ವೆಂಕಟಶಾಮಿ ಹುಚ್ಚನಂತೆ ಅಲೆದು ಅಂತಿಮವಾಗಿ ಸಾವನ್ನಪ್ಪುತ್ತಾನೆ. ಆತನ ಸಮಾಧಿಯು ಜಾತಿವ್ಯವಸ್ಥೆಯ ಕಲ್ಲಿನಂತಹ ಹೃದಯಹೀನತೆಗೆ ಬಲಿಯಾದ ನೈಜ ಪ್ರೇಮದ ಸಂಕೇತವಾಗಿ ನಿಲ್ಲುತ್ತದೆ. ಇಲ್ಲಿ ಮಾಸ್ತಿಯವರು ವೆಂಕಟಶಾಮಿಯನ್ನು ಅಸಹಾಯಕ ಬಲಿಪಶುವಾಗಿಸದೆ, ಸಾಮಾಜಿಕ ಕಟ್ಟುಪಾಡುಗಳ ವಿರುದ್ಧ ತನ್ನ ಪ್ರೇಮನಿಷ್ಠೆಯಿಂದಲೇ ಗೆದ್ದು ನಿಲ್ಲುವ ದುರಂತ ನಾಯಕನನ್ನಾಗಿ ರೂಪಿಸಿದ್ದಾರೆ. ಜಾತಿಯ ಸಾಂಪ್ರದಾಯಿಕ ಅಧಿಕಾರವು ವ್ಯಕ್ತಿಯ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಕ್ರೌರ್ಯವನ್ನು ಈ ಕತೆ ಅತ್ಯಂತ ಗಾಢವಾದ ಕಲಾತ್ಮಕ ಕಳಕಳಿಯಿಂದ ಬಯಲುಮಾಡುತ್ತದೆ.

ವಸಾಹತುಶಾಹಿ ಆಡಳಿತವು ಭಾರತಕ್ಕೆ ತಂದ ಪ್ರಮುಖ ಬದಲಾವಣೆಯೆಂದರೆ ಸಾಕ್ಷ್ಯಾಧಾರಿತ ಲಿಖಿತ ನ್ಯಾಯಾಂಗ ವ್ಯವಸ್ಥೆ. ಈ ಯಾಂತ್ರಿಕ ಕಾಯ್ದೆ ಮತ್ತು ಸ್ಥಳೀಯ ನೈತಿಕ ಸತ್ಯಗಳ ನಡುವಿನ ತಿಕ್ಕಾಟವನ್ನು ಮಾಸ್ತಿಯವರ 'ಇಲ್ಲಿಯ ತೀರ್ಪು' ಕತೆ ಅದ್ಭುತವಾಗಿ ಸೆರೆಹಿಡಿದಿದೆ. ಬ್ರಿಟಿಷ್ ಮ್ಯಾಜಿಸ್ಟ್ರೇಟ್ ಸಾಹೇಬನೊಬ್ಬನ ದಿನಚರಿಯ ತಂತ್ರದ ಮೂಲಕ ನಿರೂಪಿತವಾಗುವ ಈ ಕತೆಯಲ್ಲಿ, ಕಳ್ಳತನದ ಆರೋಪ ಹೊತ್ತ ವಡ್ಡರ ಸಮುದಾಯದ ರಾಮಾಬೋಯಿ ಮತ್ತು ತಿಮ್ಮಾಬೋಯಿ ವಿಚಾರಣೆಗೆ ಒಳಪಡುತ್ತಾರೆ. ತಮ್ಮ ಕುಲದೇವತೆಯ ಮುಂದೆ ಎಂದಿಗೂ ಸುಳ್ಳು ಹೇಳದ ಈ ಮುಗ್ಧ ಜನ, ಕ್ರೈಸ್ತ ಪಾದ್ರಿಯ ಪ್ರಭಾವದಿಂದ ಮತಾಂತರಗೊಂಡ ನಂತರ ಪರಂಪರೆಯ ದೈವಭಯವನ್ನೂ ಕಳೆದುಕೊಳ್ಳುತ್ತಾರೆ, ಹೊಸ ಧರ್ಮದ ಅಂತರಂಗದ ಸತ್ವವನ್ನೂ ಪಡೆಯಲಾಗದೆ ಭ್ರಷ್ಟರಾಗುತ್ತಾರೆ. ನ್ಯಾಯಾಲಯದ ಕಣ್ಣಿಗೆ ಕಾಣುವ ಭೌತಿಕ ಸಾಕ್ಷ್ಯಗಳ ಕೊರತೆಯಿಂದಾಗಿ ಬ್ರಿಟಿಷ್ ನ್ಯಾಯಾಧೀಶನು ಅವರನ್ನು ಖುಲಾಸೆಗೊಳಿಸಿದರೂ, ಅಂತರಂಗದಲ್ಲಿ ಅವರು ಅಪರಾಧಿಗಳೆಂಬುದು ಆತನಿಗೆ ತಿಳಿದಿರುತ್ತದೆ. ಲೌಕಿಕ ಕಾನೂನು ನೀಡುವ ತೀರ್ಪಿಗೂ, ಪರಮ ಸತ್ಯವಾದ ಆಂತರಿಕ ನ್ಯಾಯಕ್ಕೂ ನಡುವೆ ಇರುವ ಕಂದಕವನ್ನು "ಅದು ಇಲ್ಲಿಯ ತೀರ್ಪು" ಎಂಬ ಮಾರ್ಮಿಕ ವಾಕ್ಯವು ಧ್ವನಿಸುತ್ತದೆ. ಸಾಂಪ್ರದಾಯಿಕ ನೈತಿಕತೆಯು ಕೇವಲ ಕಾನೂನಿನ ವಿಧಿವಿಧಾನಗಳಿಗಿಂತ ಎಷ್ಟೋ ಪಟ್ಟು ಪರಿಣಾಮಕಾರಿಯಾಗಿ ಮಾನವನ

ಅಂತರಂಗವನ್ನು ಶುದ್ಧವಾಗಿಟ್ಟಿತ್ತು ಎಂಬುದನ್ನು ಈ ಕಥನ ನಿರೂಪಿಸುತ್ತದೆ.

ಇದೇ ನ್ಯಾಯಾಂಗ ಸಂಘರ್ಷವು 'ಜೋಗ್ಯೋರ ಅಂಜಪ್ಪನ ಕೋಳಿಕತೆ'ಯಲ್ಲಿ ನವಿರಾದ ಹಾಸ್ಯ ಮತ್ತು ಜಾನಪದ ವಿವೇಕದೊಂದಿಗೆ ಮರುಕಳಿಸುತ್ತದೆ. ಹೊಸದಾಗಿ ಅಧಿಕಾರ ವಹಿಸಿಕೊಂಡ ಬೆಂಚ್ ಮ್ಯಾಜಿಸ್ಟ್ರೇಟ್ ರಂಗಪ್ಪನಿಗೆ ವೃದ್ಧ ಜೋಗಿ ಅಂಜಪ್ಪನು ನ್ಯಾಯದಾನದ ಜಟಿಲತೆಯನ್ನು ವಿವರಿಸಲು ತನ್ನ ಮೇಲೆ ಹೊರಿಸಲಾಗಿದ್ದ ಸುಳ್ಳು ಕೋಳಿ ಕಳ್ಳತನದ ಅನುಭವವನ್ನು ಹಂಚಿಕೊಳ್ಳುತ್ತಾನೆ. ಅಂಜಪ್ಪನ ಜೋಳಿಗೆಯಲ್ಲಿ ಕೋಳಿ ಸಿಕ್ಕಿರುವುದು ಬ್ರಿಟಿಷ್ ಕಾನೂನಿನ ತರ್ಕದ ಪ್ರಕಾರ ಪ್ರಶ್ನಾತೀತ ಸಾಕ್ಷ್ಯವಾಗಿ ಕಂಡರೂ, ವಾಸ್ತವದಲ್ಲಿ ಹಳ್ಳಿಯ ಯುವತಿಯೊಬ್ಬಳು ತನ್ನ ರಹಸ್ಯ ಪ್ರಣಯವನ್ನು ಮುಚ್ಚಿಕೊಳ್ಳಲು ಆ ಕೋಳಿಯನ್ನು ಆತನ ಜೋಳಿಗೆಗೆ ತಳ್ಳಿರುತ್ತಾಳೆ. ಬಾಹ್ಯ ಸಾಕ್ಷ್ಯಗಳನ್ನೇ ಸತ್ಯವೆಂದು ನಂಬುವ ಆಡಳಿತಶಾಹಿ ದೃಷ್ಟಿಗೂ, ಘಟನೆಯ ಆಳದಲ್ಲಿರುವ ಸಂಕೀರ್ಣ ಮನುಷ್ಯ ಸಂಬಂಧಗಳನ್ನು ಗ್ರಹಿಸುವ ಸಾಂಪ್ರದಾಯಿಕ ಒಳನೋಟಕ್ಕೂ ಇರುವ ವ್ಯತ್ಯಾಸವನ್ನು ಅಂಜಪ್ಪನ ಮಾತುಗಳು ನಗೆಯ ಮೂಲಕವೇ ಎತ್ತಿತೋರಿಸುತ್ತವೆ. ಆಧುನಿಕ ಕಾನೂನು ಕೇವಲ ಪತ್ರಗಳನ್ನು ನೋಡಿದರೆ, ಸಾಂಪ್ರದಾಯಿಕ ವಿವೇಕವು ಮನುಷ್ಯನ ಅಂತಃಕರಣವನ್ನು ತೂಗುತ್ತದೆ ಎಂಬುದನ್ನು ಮಾಸ್ತಿ ಇಲ್ಲಿ ಕಲಾತ್ಮಕವಾಗಿ ಸಮರ್ಥಿಸುತ್ತಾರೆ.

ವಸಾಹತುಶಾಹಿ ಧರ್ಮಪ್ರಚಾರ ಹಾಗೂ ಸಂಸ್ಕೃತಿ ಆಕ್ರಮಣದ ಜಟಿಲ ಮುಖಾಮುಖಿಯನ್ನು ಮಾಸ್ತಿಯವರು 'ಡೂಬಾಯಿ ಪಾದ್ರಿಯ ಒಂದು ಪತ್ರ' ಕತೆಯಲ್ಲಿ ಮಹಾಕಥನದ ಎತ್ತರಕ್ಕೆ ಕೊಂಡೊಯ್ಯುತ್ತಾರೆ. ಟಿಪ್ಪು ಸುಲ್ತಾನನ ಆಳ್ವಿಕೆಯ ಪತನಾನಂತರ ಶ್ರೀರಂಗಪಟ್ಟಣಕ್ಕೆ ಬಂದ ಫ್ರೆಂಚ್ ಪಾದ್ರಿ ಅಬ್ಬೆ ದುಬಾಯ್ ತನ್ನ ಧರ್ಮಾಧಿಕಾರಿಗೆ ಬರೆಯುವ ವರದಿಯ ರೂಪದಲ್ಲಿ ಈ ಕತೆ ಸಾಗುತ್ತದೆ. ಪಾದ್ರಿಯು ಯುರೋಪಿಯನ್ ಜ್ಞಾನೋದಯದ ತರ್ಕದಿಂದ ಹಿಂದೂ ಸಮಾಜದ ಮಡಿವಂತಿಕೆ, ಜಾತಿಭೇದ ಹಾಗೂ ನಿಷ್ಕ್ರಿಯತೆಗಳನ್ನು ಟೀಕಿಸುತ್ತಲೇ, ಬಲವಂತದ ಮತಾಂತರಕ್ಕೆ ತುತ್ತಾದ ಬ್ರಾಹ್ಮಣ ಯುವಕ ನರಸಿಂಹನ (ಮೊಹಮ್ಮದ್ ಅಬ್ಬಾಸ್) ದುರಂತವನ್ನು ದಾಖಲಿಸುತ್ತಾನೆ. ಯುದ್ಧ ಮುಗಿದ ಬಳಿಕ ತಾಯ್ನೆಲಕ್ಕೆ ಮರಳಿ, ಪ್ರಾಯಶ್ಚಿತ್ತ ಪಡೆದು ಸ್ವಧರ್ಮವನ್ನು ಸೇರಲು ಹಾತೊರೆದ ನರಸಿಂಹನಿಗೆ ಸಾಂಪ್ರದಾಯಿಕ ಹಿಂದೂ ಸಮಾಜವು ಕ್ಷಮೆಯನ್ನೇ ನೀಡದೆ ಜಾತಿಭ್ರಷ್ಟನೆಂದು ಬಾಗಿಲು ಮುಚ್ಚುತ್ತದೆ. ಈ ತಿರಸ್ಕಾರದಿಂದ ಆಕ್ರೋಶಗೊಂಡ ಆತ ಅನ್ಯಮತೀಯ ಸೈನ್ಯವನ್ನು ಸೇರಿ ತನ್ನವರ ವಿರುದ್ಧವೇ ಸೇಡು ತೀರಿಸಿಕೊಳ್ಳುವ ಹಂತಕ್ಕೆ ತಲುಪುತ್ತಾನೆ. ಮಾಸ್ತಿಯವರು ಪಾದ್ರಿಯ ಪಾತ್ರವನ್ನು ಒಂದು ಸಾಂಸ್ಕೃತಿಕ ಕನ್ನಡಿಯನ್ನಾಗಿ ಬಳಸಿಕೊಂಡು, ವಸಾಹತುಶಾಹಿಗಳ ಅಂಧ ಧರ್ಮಪ್ರಚಾರದ ಹುನ್ನಾರವನ್ನೂ, ಜೊತೆಜೊತೆಗೇ ತನ್ನವರನ್ನೇ ರಕ್ಷಿಸಿಕೊಳ್ಳಲಾಗದ ಹಿಂದೂ ಸಮಾಜದ ಸನಾತನ ಮಡಿವಂತಿಕೆಯ ಜಡತೆಯನ್ನೂ ಏಕಕಾಲದಲ್ಲಿ ನಿಷ್ಠುರ ವಿಮರ್ಶೆಗೆ ಗುರಿಪಡಿಸುತ್ತಾರೆ.

ಭಾರತೀಯ ಕಲೆ ಮತ್ತು ಆಧ್ಯಾತ್ಮಿಕ ಸಂಕೇತಗಳನ್ನು ವಸಾಹತುಶಾಹಿ ಪ್ರಭುತ್ವವು ಕೇವಲ ಮ್ಯೂಸಿಯಂನ ಸಂಗ್ರಹಯೋಗ್ಯ ಸರಕುಗಳನ್ನಾಗಿ ಮಾರ್ಪಡಿಸಿದ ಬಗೆಯನ್ನು 'ವಸುಮತಿ' ಕತೆಯು ತೀವ್ರವಾಗಿ ವಿರೋಧಿಸುತ್ತದೆ. ಪಾಳುಬಿದ್ದ ವಸುಮತಿ ಗ್ರಾಮದ ಪುರಾತನ ದೇವಾಲಯದಿಂದ ಅಪರೂಪದ ಗೋಪಾಲಕೃಷ್ಣನ ಅಪೂರ್ಣ ಶಿಲ್ಪವನ್ನು ಕಡಿದು ಲಂಡನ್ನಿನ ಸಂಗ್ರಹಾಲಯಕ್ಕೆ ಸಾಗಿಸಲು ಇಂಗ್ಲಿಷ್ ಪುರಾತತ್ವಜ್ಞ ಬೆರೆಸ್‌ಫರ್ಡ್ ಯತ್ನಿಸುತ್ತಾನೆ. ಆದರೆ ಸ್ಥಳೀಯ ವೃದ್ಧ ಕೃಷ್ಣಯ್ಯನಿಗೆ ಆ ವಿಗ್ರಹವು ಸಜೀವ ಚೈತನ್ಯ ಹಾಗೂ ಸಾಮುದಾಯಿಕ ಭಕ್ತಿಯ ಕೇಂದ್ರವಾಗಿರುತ್ತದೆ. ಕಲೆಯೆಂಬುದು ಪಶ್ಚಿಮಕ್ಕೆ ಕೇವಲ ವಸ್ತುಪ್ರದರ್ಶನದ ಆಸ್ತಿಯಾದರೆ, ಭಾರತೀಯ ಸಂಪ್ರದಾಯಕ್ಕೆ ಅದು ನಿತ್ಯ ಆರಾಧನೆಯ ಆಧ್ಯಾತ್ಮಿಕ ಉಸಿರಾಗಿರುತ್ತದೆ. ಬೆರೆಸ್‌ಫರ್ಡನ ಪತ್ನಿಯೇ

ಭಾರತಮಾತೆಯ ಪರಕಾಯ ಪ್ರವೇಶದ ಸಂಕೇತದಂತೆ ಮೂರ್ಛೆಹೋಗಿ, ತನ್ನ ಪತಿಯ ಲೂಟಿಯ ಪ್ರವೃತ್ತಿಯನ್ನು ತಡೆದು ಆ ಪವಿತ್ರ ಕಲಾಕೃತಿಯನ್ನು ಅದೇ ನೆಲದಲ್ಲಿ ಉಳಿಸುವಂತೆ ಮಾಡುತ್ತಾಳೆ. ಅದೇ ರೀತಿ 'ಸೋರಲಿ ಪ್ರಸಂಗ' ಕತೆಯಲ್ಲಿ ಕೊಡಗಿನ ಕಾಫಿ ತೋಟಗಳ ಬ್ರಿಟಿಷ್ ಪ್ಲಾಂಟರ್‌ಗಳ ಭೋಗಲಾಲಸೆಯ ಬದುಕು ಸ್ಥಳೀಯ ಕೌಟುಂಬಿಕ ಪರಿಶುದ್ಧತೆಯ ಎದುರು ಹೇಗೆ ಪತನಗೊಳ್ಳುತ್ತದೆ ಎಂಬುದನ್ನು ಮಾಸ್ತಿ ಚಿತ್ರಿಸಿದ್ದಾರೆ. ನಾಗರಿಕತೆಯ ಮುಂಚೂಣಿಯಲ್ಲಿದ್ದೇವೆಂದು ಬೀಗುತ್ತಿದ್ದ ವಸಾಹತುಶಾಹಿ ಆಡಳಿತಗಾರರ ನೈತಿಕ ದಾರಿದ್ರ್ಯವನ್ನು ದೇಶೀಯ ದಾಂಪತ್ಯ ನಿಷ್ಠೆಯ ಮಾನದಂಡದಿಂದ ಅಳೆಯುವ ವಿಶಿಷ್ಟ ಸಾಂಸ್ಕೃತಿಕ ಪ್ರತಿರೋಧ ಇಲ್ಲಿದೆ.

ಕಂದಾಯ ಆಡಳಿತ ಹಾಗೂ ರೈತಜೀವನದ ಮುಖಾಮುಖಿಯನ್ನು ಮಾಸ್ತಿಯವರ 'ಬೈಚೇಗೌಡ' ಕತೆಯು ಅದ್ಭುತವಾಗಿ ನಿರೂಪಿಸಿದೆ. ಬೈಚೇಗೌಡನು ಪ್ರಾಮಾಣಿಕವಾಗಿ ಕಂದಾಯ ಪಾವತಿಸಿದ್ದರೂ, ಭ್ರಷ್ಟ ಶಾನುಭೋಗ ಸೀತಪ್ಪ ಆ ಹಣವನ್ನು ನುಂಗಿ ಗೌಡನ ಭೂಮಿಯನ್ನು ಹರಾಜಿಗೆ ಹಾಕಲು ಯತ್ನಿಸುತ್ತಾನೆ. ಗೌಡನು ತನ್ನ ಸ್ವಾಭಿಮಾನಕ್ಕಾಗಿ ರಸೀತಿಯನ್ನು ಬಚ್ಚಿಟ್ಟು, ನಂತರ ಸೀತಪ್ಪನ ತಾಯಿಯ ಕಣ್ಣೀರಿಗೆ ಕರಗಿ ರಸೀತಿ ನೀಡಿ ಊರನ್ನೇ ತೊರೆಯುತ್ತಾನೆ. ಕಾಲದ ವೈಚಿತ್ರ್ಯದಿಂದ ಬೆಂಗಳೂರಿನ ಸೆರೆಮನೆಯ ಮುಖ್ಯ ವಾರ್ಡರ್ ಆಗುವ ಬೈಚೇಗೌಡನ ಅಧೀನಕ್ಕೇ, ಸರ್ಕಾರಿ ಹಣ ದುರುಪಯೋಗಪಡಿಸಿಕೊಂಡ ಸೀತಪ್ಪ ಕೈದಿಯಾಗಿ ಬರುತ್ತಾನೆ. ಸಾಯುತ್ತಿರುವ ಪತ್ನಿಯನ್ನು ನೋಡಲು ಸೀತಪ್ಪ ಒಂದು ರಾತ್ರಿ ರಹಸ್ಯವಾಗಿ ಹೋಗಿಬರಲು ಬೇಡಿದಾಗ, ಗೌಡನಲ್ಲಿ ಸರ್ಕಾರಿ ಕಾನೂನಿನ ಕರ್ತವ್ಯ ಮತ್ತು ಮನುಷ್ಯತ್ವದ ಕರುಣೆಗಳ ನಡುವೆ ತೀವ್ರ ಆಂತರಿಕ ಸಂಘರ್ಷ ಸ್ಫೋಟಗೊಳ್ಳುತ್ತದೆ. ಗೌಡ ನಿಯಮವನ್ನು ಮುರಿದು ಸೀತಪ್ಪನಿಗೆ ಕರುಣೆ ತೋರುತ್ತಾನೆ; ಆದರೆ ವೃತ್ತಿಧರ್ಮಕ್ಕೆ ಚ್ಯುತಿ ತಂದನೆಂಬ ನೈತಿಕ ಪ್ರಜ್ಞೆಯಿಂದ ತಾನೇ ಸ್ವಯಂಪ್ರೇರಿತನಾಗಿ ಸೌಕರಿಗೆ ರಾಜೀನಾಮೆ ನೀಡುತ್ತಾನೆ. ವಸಾಹತುಶಾಹಿ ಲಿಖಿತ ಕಾನೂನು ವಿಧಿಸುವ ಕಠಿಣ ಕರ್ತವ್ಯಕ್ಕಿಂತ, ಮನುಷ್ಯನ ಆತ್ಮಸಾಕ್ಷಿ ಮತ್ತು ಕರುಣೆಯ ಧರ್ಮವೇ ಶ್ರೇಷ್ಠವೆಂಬುದನ್ನು ಬೈಚೇಗೌಡನ ನಡವಳಿಕೆ ಎತ್ತಿಹಿಡಿಯುತ್ತದೆ.

ಹಳೆಯ ರಾಜಪ್ರಭುತ್ವದಿಂದ ಹೊಸ ಕಾಲದ ಬಂಡವಾಳಶಾಹಿ ಸಾರಿಗೆ ವ್ಯವಸ್ಥೆಗೆ ಸಮಾಜ ಹೊರಳಿದಾಗ ಕೆಳವರ್ಗದ ಜನರ ಬದುಕಿನಲ್ಲಿ ಸಂಭವಿಸಿದ ಪಲ್ಲಟ 'ಟಾಂಗಾ ಹುಸೇನಿ' ಕತೆಯ ವಸ್ತುವಾಗಿದೆ. ರಾಜನ ಆಸ್ಥಾನದಲ್ಲಿ ಸಾರೋಟು ಹೊಡೆಯುತ್ತಿದ್ದ ಹುಸೇನನು, ರಾಜಪ್ರಭುತ್ವ ಮುಗಿದ ಮೇಲೆ ನಗರದ ರಸ್ತೆಯಲ್ಲಿ ಬಾಡಿಗೆ ಟಾಂಗಾ ಹೊಡೆಯುವ ಅಸಹಾಯಕ ಕೂಲಿಯಾಗುತ್ತಾನೆ. ಆತನ ಸಂಭಾಷಣೆಯಲ್ಲಿ ಹಳೆಯ ರಾಜರ ದರ್ಪ ಮತ್ತು ದುಂದುವೆಚ್ಚದ ಬಗೆಗೆ ಕಟು ವ್ಯಂಗ್ಯವಿದೆ. ಆದರೆ ಹೊಸ ಕಾಲದ ಆಡಳಿತವೂ ಆತನ ದಾರಿದ್ರ್ಯವನ್ನು ನೀಗಿಸಿರುವುದಿಲ್ಲ. ರಾಜನ ಪತನಕ್ಕೆ ತನ್ನ ಶಾಪವೇ ಕಾರಣವಾಯಿತೇನೋ ಎಂದು ಪಶ್ಚಾತ್ತಾಪಪಡುವ ಹುಸೇನನ ಪಾತ್ರದ ಮೂಲಕ, ಮಾಸ್ತಿಯವರು ಆಡಳಿತ ಪಲ್ಲಟಗಳ ನಡುವೆ ನಲುಗುವ ಜನಸಾಮಾನ್ಯರ ದುರಂತವನ್ನು ಚಿತ್ರಿಸುತ್ತಾರೆ. ಇನ್ನು 'ಪಂಡಿತನ ಮರಣಶಾಸನ' ಕತೆಯಲ್ಲಿ ಧಾರ್ಮಿಕ ಪಂಥೀಯತೆ ಹಾಗೂ ಉನ್ನತ ರಾಜನೀತಿಯ ನಡುವಣ ತಿಕ್ಕಾಟವನ್ನು ಅದ್ಭುತವಾಗಿ ಕಟ್ಟಿಕೊಡಲಾಗಿದೆ. ಜೈನ ಮತದ ಪ್ರಧಾನಿ ವಿಶಾಲಾಕ್ಷ ಪಂಡಿತರು ಕಂದಾಯ ದಂಗೆಯೆದ್ದ ವೀರಶೈವ ಜಂಗಮರಿಗೆ ಶಿಕ್ಷೆ ವಿಧಿಸಿದಾಗ ಅದನ್ನು ಮತೀಯ ದ್ವೇಷವೆಂದು ತಪ್ಪಾಗಿ ಗ್ರಹಿಸಲಾಗುತ್ತದೆ. ಮರಣಶಯ್ಯೆಯಲ್ಲಿರುವ ಪಂಡಿತರು, ತಮ್ಮ ತೀವ್ರ ಸೈದ್ಧಾಂತಿಕ ವಿರೋಧಿಯಾಗಿದ್ದ ವೈಷ್ಣವ ಮಂತ್ರಿ ತಿರುಮಲಾರ್ಯರನ್ನೇ ಮುಂದಿನ ಪ್ರಧಾನಮಂತ್ರಿ ಸ್ಥಾನಕ್ಕೆ ಹೆಸರಿಸುವ ಮೂಲಕ, ಸಂಕುಚಿತ

ಮತೀಯತೆಗಿಂತ ಪ್ರಜಾಹಿತ ಮತ್ತು ಅರ್ಹತೆಯೇ ಆಡಳಿತದ ಪರಮ ಮೌಲ್ಯವೆಂದು ಸಾರುತ್ತಾರೆ.

ಸ್ತ್ರೀ ಸಂವೇದನೆ ಹಾಗೂ ಸಾಂಪ್ರದಾಯಿಕ ಕೌಟುಂಬಿಕ ಮೌಲ್ಯಗಳ ಪುನರ್ವ್ಯಾಖ್ಯಾನವು ಮಾಸ್ತಿಯವರ ಕಥಾಸಾಹಿತ್ಯದ ಕೇಂದ್ರ ಆಶಯಗಳಲ್ಲಿ ಒಂದಾಗಿದೆ. 'ವೆಂಕಟಗನ ಹೆಂಡತಿ' ಕತೆಯಲ್ಲಿ ಪರಪುರುಷನಿಂದ ಮೋಸ ಹೋಗಿ ಗರ್ಭಿಣಿಯಾಗಿ ಹಿಂತಿರುಗಿದ ಹೆಂಡತಿ ರಂಗಿಯನ್ನು ಸಮಾಜವು ಕಲ್ಲಿನಿಂದ ಹೊಡೆದು ಕೊಲ್ಲಲು ಸಿದ್ಧವಾದಾಗ, ಕಟ್ಟಿಗೆ ಹೊರುವ ಮುಗ್ಧ ವೆಂಕಟಗನು ಆಕೆಯನ್ನು ರಕ್ಷಿಸಿ, ಆಕೆಯ ಮಗುವನ್ನು "ಮಗು ಯಾರದೇನು? ಬಾಲಗೋಪಾಲ, ಸಾಕಿದವರು ಪುಣ್ಯವಂತರು" ಎಂದು ಸ್ವೀಕರಿಸುತ್ತಾನೆ. ಪಿತೃಪ್ರಧಾನ ಸಮಾಜವು ರಕ್ತಶುದ್ಧತೆ ಮತ್ತು ಪಾತಿವ್ರತ್ಯದ ಹೆಸರಿನಲ್ಲಿ ವಿಧಿಸಿದ ಕಠೋರ ನಿರ್ಬಂಧಗಳನ್ನು ಮೀರಿ, ಪ್ರೇಮ ಮತ್ತು ಕರುಣೆಯ ಅಂತಃಕರಣವನ್ನು ಮೆರೆಯುವ ವೆಂಕಟಗನ ನಿಲುವು ಸಾಂಪ್ರದಾಯಿಕ ಮೌಲ್ಯಗಳನ್ನೇ ಮಾನವೀಯ ನೆಲೆಯಲ್ಲಿ ನವೀಕರಿಸುತ್ತದೆ. 'ಗೌತಮಿ ಹೇಳಿದ ಕತೆ'ಯಲ್ಲಿ ಯೌವನದ ಪ್ರಣಯ ದುರಂತದಿಂದ ಕಂಗೆಟ್ಟ ಮಾಲಿನಿಯ ಕಾಮೋದ್ವೇಗವನ್ನು ತಪಸ್ವಿ ದತ್ತನು ಮಾತೃತ್ವದ ದೈವಿಕ ಪಾವಿತ್ರ್ಯಕ್ಕೆ ರೂಪಾಂತರಿಸುವ ಬಗೆಯು, ಇಂದ್ರಿಯಜನ್ಯ ಪ್ರವೃತ್ತಿಯನ್ನು ಆಧ್ಯಾತ್ಮಿಕ ಸಂಯಮದ ಮೂಲಕ ಗೆಲ್ಲುವ ಭಾರತೀಯ ಸಾಂಸ್ಕೃತಿಕ ದರ್ಶನವನ್ನು ಸಾದರಪಡಿಸುತ್ತದೆ. 'ಆಚಾರವಂತ ಅಯ್ಯಂಗಾರು' ಕತೆಯಲ್ಲಿ ಕಟ್ಟುನಿಟ್ಟಾದ ಶ್ರೀವೈಷ್ಣವ ಅಯ್ಯಂಗಾರರು ಮತ್ತು ಕ್ರಿಶ್ಚಿಯನ್ ನರ್ಸ್ ಸುಶೀಲಮ್ಮ ಪರಸ್ಪರ ನಿಷ್ಠೆಯ ಮುಕ್ತ ದಾಂಪತ್ಯ ನಡೆಸುತ್ತಾರೆ. ಅಯ್ಯಂಗಾರರ ಮರಣಾನಂತರ ಆಕೆಯು ಅವರ ಇಷ್ಟದಂತೆ ಸಾಂಪ್ರದಾಯಿಕ ವೈಷ್ಣವ ಸಂಸ್ಕಾರಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸುವಂತೆ ಮಾಡುವುದು, ಬಾಹ್ಯ ಮಡಿವಂತಿಕೆಗಿಂತ ಅಂತರಂಗದ ಶುದ್ಧ ಪ್ರೇಮವೇ ನಿಜವಾದ ಆಚಾರವೆಂಬುದನ್ನು ನಿರೂಪಿಸುತ್ತದೆ.

ಮಾಸ್ತಿಯವರ ಕಥನ ಸಂವಿಧಾನ ಹಾಗೂ ಭಾಷಿಕ ರಚನೆಯು ವಸಾಹತುಶಾಹಿ ಆಧುನಿಕತೆ ಮತ್ತು ದೇಶೀಯ ಮೌಖಿಕತೆಗಳ ಕಲಾತ್ಮಕ ಸಮಾಗಮವಾಗಿದೆ. ಅವರು ಪಾಶ್ಚಾತ್ಯ ಸಣ್ಣಕತೆಯ ಬಿಗಿಯಾದ ಶಿಲ್ಪ, ಏಕಾಗ್ರತೆ ಹಾಗೂ ಸಂಯಮಗಳನ್ನು ಎಡ್ಗರ್ ಅಲೆನ್ ಪೋ ಮೊದಲಾದವರಿಂದ ಮೈಗೂಡಿಸಿಕೊಂಡರೂ, ಕಥೆ ಹೇಳುವ ಲಯವನ್ನು ಭಾರತೀಯ ಹರಿಕಥೆ, ಪಂಚತಂತ್ರ ಮತ್ತು ಅಜ್ಜಿಯ ಕತೆಗಳ ಪರಂಪರೆಯಿಂದಲೇ ರೂಪಿಸಿಕೊಂಡರು. ಅವರ ಬಹುಪಾಲು ಕತೆಗಳಲ್ಲಿ ಕಂಡುಬರುವ 'ಚೌಕಟ್ಟಿನ ನಿರೂಪಣೆ' (Frame Narrative) ಅಥವಾ 'ಕತೆಯೊಳಗೆ ಕತೆ' ಹೇಳುವ ವಿಧಾನವು ಈ ಸಾಂಸ್ಕೃತಿಕ ದ್ವಂದ್ವವನ್ನು ಸಂವಹಿಸುವ ತಂತ್ರವಾಗಿದೆ. ಇಂಗ್ಲಿಷ್ ಕಲಿತ, ನಗರಪ್ರಜ್ಞೆಯ ಅಧಿಕಾರಿಯೊಬ್ಬನು ಹಳ್ಳಿಯ ಪರಿಸರಕ್ಕೆ ಬಂದಾಗ, ಅಲ್ಲಿನ ವೃದ್ಧ ಹಿರಿಯರೊಬ್ಬರು ಬದುಕಿನ ಸಂಕೀರ್ಣ ಕತೆಯನ್ನು ಬಿಚ್ಚಿಡುತ್ತಾರೆ. ಈ ತಂತ್ರವು ವಸಾಹತುಶಾಹಿ ಆಧುನಿಕ ಪ್ರಜ್ಞೆ ಮತ್ತು ದೇಶೀಯ ಗ್ರಾಮೀಣ ಪ್ರಜ್ಞೆಗಳ ನಡುವೆ ಜೀವಂತ ಸಂವಾದವನ್ನು ಏರ್ಪಡಿಸುತ್ತದೆ. ಮಾಸ್ತಿಯವರ ಭಾಷೆಯಲ್ಲಿ ನಿರೂಪಕನ ಶಿಷ್ಟ ಕನ್ನಡ ಮತ್ತು ಪಾತ್ರಗಳ ಪ್ರಾದೇಶಿಕ ಆಡುನುಡಿಗಳು ಅತ್ಯಂತ ಸಾವಯವವಾಗಿ ಬೆರೆತುಕೊಂಡಿವೆ. ಅವರ ಶೈಲಿಯು ಕೂಗಾಡುವ ಆಕ್ರೋಶಕ್ಕೆ ಬದಲಾಗಿ, ಮಂದಹಾಸ, ತಿಳಿಹಾಸ್ಯ ಮತ್ತು ತಣ್ಣನೆಯ ವಿಷಾದದ ಸಂಯಮದಿಂದ ಕೂಡಿದೆ.

ಕನ್ನಡ ಸಾಹಿತ್ಯ ವಿಮರ್ಶಾ ಪರಂಪರೆಯಲ್ಲಿ ಮಾಸ್ತಿಯವರ ಈ ಸಮನ್ವಯ ದೃಷ್ಟಿಯು ತೀವ್ರ ಚರ್ಚೆಗಳಿಗೆ ಗ್ರಾಸವಾಗಿದೆ. ಕೀರ್ತಿನಾಥ ಕುರ್ತಕೋಟಿಯವರು ತಮ್ಮ ಯುಗಧರ್ಮ ಹಾಗೂ ಸಾಹಿತ್ಯ ದರ್ಶನ ಕೃತಿಯಲ್ಲಿ ಗುರುತಿಸಿದಂತೆ, ಮಾಸ್ತಿಯವರ ಕಥೆಗಳು ಸಂಪ್ರದಾಯದ ಹೊರಗೆ ನಿಂತು ದಂಗೆಯೇಳುವ ಕ್ರಾಂತಿಕಾರಿ ಕೃತಿಗಳಲ್ಲ; ಬದಲಿಗೆ ಸಂಪ್ರದಾಯದ ಒಳಗೆಯೇ ಕುಳಿತು, ಅದರ

ಲೋಪದೋಷಗಳನ್ನು ಕರುಣೆಯಿಂದ ತಿದ್ದಿ ಮರುಪರಿಶೀಲಿಸುವ ಸಮಚಿತ್ತದ ದರ್ಶನಗಳಾಗಿವೆ. ಪ್ರೊ. ಜಿ.ಎಸ್. ಆಮೂರರು ಮಾಸ್ತಿಯವರ ಕಥಾಸಾಹಿತ್ಯದಲ್ಲಿ ಕೇವಲ ಸಮಾಧಾನ ಮಾತ್ರವಲ್ಲದೆ, ಬದುಕಿನ ಅನಿವಾರ್ಯ ದುರಂತದ (Tragic Vision) ನಿಷ್ಕರುಣ ಅರಿವಿದೆ ಎಂದು ಪ್ರತಿಪಾದಿಸುತ್ತಾರೆ. ಡಾ. ಯು. ಆರ್. ಅನಂತ ಮೂರ್ತಿಯವರು ತಮ್ಮ ಪ್ರಜ್ಞೆ ಮತ್ತು ಪರಿಸರ ಕೃತಿಯಲ್ಲಿ ನವೋದಯದ ಸಮನ್ವಯತೆಯನ್ನು ಪ್ರಶ್ನಿಸುತ್ತಾ, ಮಾಸ್ತಿಯವರು ವ್ಯವಸ್ಥೆಯ ಆಮೂಲಾಗ್ರ ಕ್ರಾಂತಿಕಾರಿ ಬದಲಾವಣೆಗೆ ಮುಂದಾಗದೆ ವೈಯಕ್ತಿಕ ನೈತಿಕ ಪರಿಹಾರಗಳನ್ನು ಹುಡುಕುತ್ತಾರೆ ಎಂಬ ಮಿತಿಯನ್ನು ಎತ್ತಿಹಿಡಿದರೂ, ಅವರ ಸಾಮುದಾಯಿಕ ಜೀವಂತಿಕೆ ಮತ್ತು ಕಥನ ಕಲೆಯ ನವಿರನ್ನು ಮುಕ್ತವಾಗಿ ಶ್ಲಾಘಿಸಿದ್ದಾರೆ. ಸಾಂಸ್ಕೃತಿಕ ವಿಮರ್ಶಕ ಡಿ.ಆರ್. ನಾಗರಾಜರು ಮಾಸ್ತಿಯವರ ನಿಲುವನ್ನು 'ವಿಮರ್ಶಾತ್ಮಕ ಸಾಂಪ್ರದಾಯಿಕತೆ' (Critical Traditionalism) ಎಂದು ಕರೆದಿದ್ದು, ವಸಾಹತುಶಾಹಿ ಆಡಳಿತಾತ್ಮಕ ಆಕ್ರಮಣದ ಎದುರು ದೇಶೀಯ ಸಾಂಸ್ಕೃತಿಕ ಸ್ಮೃತಿಯನ್ನು ಭದ್ರಪಡಿಸಿದ ಮುಖ್ಯ ಸಾಧನೆಯೆಂದು ಬಣ್ಣಿಸಿದ್ದಾರೆ.

ವಸಾಹತುಶಾಹಿ ಯುಗವು ಸೃಷ್ಟಿಸಿದ ಇಕ್ಕಟ್ಟಿನಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರರು ತೋರಿದ ಮಾರ್ಗವು ಪರಂಪರೆಯ ಕುರುಡು ನಿರಾಕರಣೆಯೂ ಅಲ್ಲ, ಸನಾತನ ಆಚಾರಗಳ ಅಂಧ ಸಮರ್ಥನೆಯೂ ಅಲ್ಲ. ಸಂಪ್ರದಾಯದ ಬಾಹ್ಯ ಆಚರಣೆಗಳು ಕಾಲಕ್ಕೆ ತಕ್ಕಂತೆ ಬದಲಾಗುವ ಕೇವಲ 'ತೊಗಟೆ'ಯಿದ್ದಂತೆ; ಆದರೆ ಒಳಗಿನ ಕರುಣೆ, ಕ್ಷಮೆ, ತ್ಯಾಗ ಮತ್ತು ಧರ್ಮಸೂಕ್ಷ್ಮಗಳು ಶಾಶ್ವತವಾದ 'ತಿರುಳು' ಎಂಬುದು ಅವರ ನಂಬಿಕೆಯಾಗಿತ್ತು. ಬಾಹ್ಯ ತೊಗಟೆ ಉದುರಿ ಹೊಸ ಆಡಳಿತ, ಹೊಸ ಶಿಕ್ಷಣ ಮತ್ತು ಹೊಸ ಮೌಲ್ಯಗಳು ಬಂದಾಗ, ಒಳಗಿನ ಮನುಷ್ಯತ್ವದ ಸತ್ವವನ್ನು ಬಿಟ್ಟುಕೊಡದೆ ಆಧುನಿಕತೆಯ ವಿವೇಕವನ್ನು ಮೈಗೂಡಿಸಿಕೊಳ್ಳುವುದೇ ನಿಜವಾದ ಸಮನ್ವಯವಾಗಿದೆ. ಜಾಗತೀಕರಣದ ಪ್ರಭಾವದಿಂದಾಗಿ ಮನುಷ್ಯನು ಸ್ವಾರ್ಥಿ ವ್ಯಕ್ತಿವಾದಿಯಾಗಿ ಸಂಸ್ಕೃತಿಯ ಬೇರುಗಳಿಂದ ಕಳಚಿಕೊಳ್ಳುತ್ತಿರುವ ಇಂದಿನ ಕಾಲದಲ್ಲೂ, ಜಾತಿ–ಮತಗಳ ಸಂಕೋಲೆಗಳನ್ನು ಮೀರಿ ಮನುಷ್ಯತ್ವದ ವಿಜಯವನ್ನು ಸಾರುವ ಮಾಸ್ತಿಯವರ ಕಥಾಸಾಹಿತ್ಯವು ಸಮಗ್ರ ಭಾರತೀಯ ಸಂಸ್ಕೃತಿಗೆ ಲಭಿಸಿದ ಸಾರ್ವಕಾಲಿಕ ಸಾಹಿತ್ಯಿಕ ಸಂಪತ್ತಾಗಿದೆ.

ಪರಾಮರ್ಶನ ಗ್ರಂಥಗಳು

- ಅನಂತಮೂರ್ತಿ, ಯು.ಆರ್. (1971). *ಪ್ರಜ್ಞೆ ಮತ್ತು ಪರಿಸರ.* ಮನೋಹರ ಗ್ರಂಥಮಾಲಾ.
- ಆಮೂರ, ಜಿ.ಎಸ್. (1996). *ಭುವನದ ಭಾಗ್ಯ.* ನವಕರ್ನಾಟಕ ಪ್ರಕಾಶನ.
- ಚಟರ್ಜಿ, ಪಾರ್ಥ. (1993). *ದಿ ನೇಶನ್ ಅಂಡ್ ಇಟ್ಸ್ ಫ್ರೇಜಿಮೆಂಟ್ಸ್: ಕೊಲೊನಿಯಲ್ ಅಂಡ್ ಪೋಸ್ಟ್‌ಕಲೋನಿಯಲ್ ಹಿಸ್ಟೋರಿಸ್.* ಪ್ರಿನ್ಸ್‌ಟನ್ ಯೂನಿವರ್ಸಿಟಿ ಪ್ರೆಸ್.
- ಹಾವನೂರ, ಶ್ರೀನಿವಾಸ. (1974). *ಹೊಸಗನ್ನಡದ ಅರುಣೋದಯ.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- ಕುರ್ತಕೋಟಿ, ಕೀರ್ತಿನಾಥ. (1962). *ಯುಗಧರ್ಮ ಹಾಗೂ ಸಾಹಿತ್ಯ ದರ್ಶನ.* ಮನೋಹರ ಗ್ರಂಥಮಾಲಾ.
- ಮಾಸ್ತಿ ವೆಂಕಟೇಶ ಅಯ್ಯಂಗಾರ್. (1968). *ಸಣ್ಣ ಕಥೆಗಳು (ಸಮಗ್ರ ಸಂಪುಟಗಳು).* ಜೀವನ ಕಾರ್ಯಾಲಯ, ಬೆಂಗಳೂರು.
- ನಾಗರಾಜ್, ಡಿ.ಆರ್. (1996). *ಸಾಹಿತ್ಯ ಕಥನ.* ಅಕ್ಷರ ಪ್ರಕಾಶನ.
- ನಂದಿ, ಆಶಿಶ್. (1983). *ದಿ ಇಂಟಿಮೇಟ್ ಎನಿಮಿ: ಲಾಸ್ ಅಂಡ್ ರಿಕವರಿ ಆ ಸೆಲ್ಫ್ ಅಂಡರ್ ಕಾಲೋನಿಯಾಲಿಸ್ಮ್.* ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.